

ದಿನಾಂಕ : 16-06-2023ರಂದು

**ಮಾನ್ಯ ಶ್ರೀ ಶರಣಬಸಪ್ಪ ದರ್ಶನಾಪೂರ**

ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು ಮತ್ತು ಯಾದಗಿರಿ ಜಿಲ್ಲಾ ಉಸ್ತುವಾರಿ ಸಚಿವರು ಇವರು ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸುವ ಮುನ್ನ ಮಂಡಳಿಯ ನೆಲ ಮಹಡಿಯಲ್ಲಿ **ಪೂಜ್ಯ ಮಹಾತ್ಮ ಗಾಂಧೀಜಿಯ ಪುತ್ಥಳಿಗೆ ಮಾಲಾರ್ಪಣೆ ಮಾಡಿದ ಸಂದರ್ಭ.**



ದಿನಾಂಕ 07-09-2023ರಂದು

ಮಂಡಳಿಯ ಕೇಂದ್ರ ಕಛೇರಿಯಲ್ಲಿ

**ಮಾನ್ಯ ಶ್ರೀ ಶರಣಬಸಪ್ಪ ದರ್ಶನಾಪುರ,**

ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು ಮತ್ತು ಯಾದಗಿರಿ ಜಿಲ್ಲಾ ಉಸ್ತುವಾರಿ ಸಚಿವರು ಇವರಿಗೆ ಖಾದಿ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಸನ್ಮಾನಿಸಿ, ನಂತರ ಸಂಘ ಸಂಸ್ಥೆಗಳ ಬೇಡಿಕೆಗಳ ಈಡೇರಿಕೆಗೆ ಮನವಿ ಸಲ್ಲಿಸಿ ಚರ್ಚಿಸಿದ ಸಂದರ್ಭ.



ದಿನಾಂಕ 7-9-2023ರಂದು

ಮಂಡಳಿಯ ಕೇಂದ್ರ ಕಛೇರಿಯಲ್ಲಿ

**ಮಾನ್ಯ ಶ್ರೀ ಶರಣಬಸಪ್ಪ ದರ್ಶನಾಪೂರ**

ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು ಮತ್ತು ಯಾದಗಿರಿ ಜಿಲ್ಲಾ ಉಸ್ತುವಾರಿ ಸಚಿವರು ಇವರಿಗೆ ಉಣ್ಣೆ ಖಾದಿ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಸನ್ಮಾನಿಸಿ ನಂತರ ಸಂಘ-ಸಂಸ್ಥೆಗಳ ಬೇಡಿಕೆಗಳ ಬಗ್ಗೆ ಚರ್ಚಿಸಿದ ಸಂದರ್ಭ.



ದಿನಾಂಕ 7-9-2023ರಂದು

ಮಂಡಳಿಯ ಕೇಂದ್ರ ಕಛೇರಿಯಲ್ಲಿ

**ಮಾನ್ಯ ಶ್ರೀ ಶರಣಬಸಪ್ಪ ದರ್ಶನಾಪೂರ**


ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು ಮತ್ತು ಯಾದಗಿರಿ ಜಿಲ್ಲಾ ಉಸ್ತುವಾರಿ ಸಚಿವರು ಇವರು ರೇಷ್ಮೆ ಖಾದಿ ಸಂಘ-ಸಂಸ್ಥೆಗಳ ಮನವಿ ಆಲಿಸುತ್ತಿರುವ ಸಂದರ್ಭ.

# ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ

ಖಾದಿ ಭವನ, ನಂ. 10, ಜಸ್ಮಾ ಭವನ ರಸ್ತೆ, ವಸಂತನಗರ, ಬೆಂಗಳೂರು – 560 052.

# KARNATAKA STATE KHADI AND VILLAGE INDUSTRIES BOARD

Khadi Bhavan, No. 10, Jasma Bhavan Road, Vasanthanagar, Bengaluru-560 052.




## ವಾರ್ಷಿಕ ವರದಿ
## Annual Report 2020-21

ಉಷ್ಣ ಕಾಲೇ ಶೀತಂ । ಶೀತ ಕಾಲೇ ಉಷ್ಣಂ । ಅದುವೆ ಖಾದಿ ವಸ್ತ್ರಂ








## ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಘಟಕಗಳ ದೃಶ್ಯಗಳು




















# ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ

ಖಾದಿ ಭವನ, ನಂ–10, ಜಸ್ಮಾ ಭವನ ರಸ್ತೆ, ವಸಂತನಗರ, ಬೆಂಗಳೂರು – 560 052.

# KARNATAKA STATE KHADI AND VILLAGE INDUSTRIES BOARD

Khadi Bhavan, No-10, Jasma Bhavan Road, Vasanthanagar, Bengalore - 560 052.

# 2020–21 ನೇ

# ಸಾಲಿನ

# ವಾರ್ಷಿಕ ವರದಿ

## Annual Report

## for the year 2020-21

# ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ

**'ಖಾದಿ ಭವನ', ನಂ–10, ಜಸ್ಮಾ ಭವನ ರಸ್ತೆ, ವಸಂತನಗರ, ಬೆಂಗಳೂರು – 560 052.**

## 2020–21ನೇ ಸಾಲಿನ ವಾರ್ಷಿಕ ವರದಿ

**ಪೀಠಿಕೆ :–**

ಪೂಜ್ಯ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಮತ್ತು ಗ್ರಾಮ ಸ್ವಾವಲಂಬನೆ ಪರಿಕಲ್ಪನೆಯನ್ನು ಸಾಕಾರಗೊಳಿಸಲು ಗ್ರಾಮೀಣ ಅನುವಂಶಿಕ ಕಸಬುದಾರರ ಮತ್ತು ಆರ್ಥಿಕ ಹಾಗೂ ಸಾಮಾಜಿಕ ಹಿಂದುಳಿದ ಕಡುಬಡವರ್ಗದ ಜನರಿಗೆ ಜೀವನಾಧಾರ ಕಲ್ಪಿಸಿ, ಅವರ ಜೀವನಮಟ್ಟ ಸುಧಾರಿಸುವ ನಿಟ್ಟಿನಲ್ಲಿ ಖಾದಿ ಮತ್ತು ಗ್ರಾಮೋದ್ಯೋಗಗಳ ಉತ್ತೇಜನ, ಸಂಘಟನೆ, ಸ್ಥಾಪನೆ ದೃಷ್ಟಿಯಿಂದ ರಾಷ್ಟ್ರಮಟ್ಟದಲ್ಲಿ ಖಾದಿ ಆಯೋಗ 1957ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು, ರಾಜ್ಯಮಟ್ಟದಲ್ಲಿ 1957ರಲ್ಲಿ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಸ್ಥಾಪನೆಯಾಗಿರುತ್ತದೆ.

**ಧ್ಯೇಯೋದ್ದೇಶಗಳು :–**

ಹೇರಳ ಮಾನವ ಸಂಪನ್ಮೂಲ ಹೊಂದಿರುವ ಭಾರತ ದೇಶದಲ್ಲಿ ಗ್ರಾಮೀಣ ಜನತೆಗೆ ಬೇಸಾಯದ ಜೊತೆಗೆ ಖಾದಿ ಮತ್ತು ಗ್ರಾಮೋದ್ಯೋಗಗಳನ್ನು ಒದಗಿಸಿ ಗ್ರಾಮ ಸ್ವರಾಜ್ಯ ಹಾಗೂ ಸ್ವಾವಲಂಬಿ ಗ್ರಾಮಗಳ ಪರಿಕಲ್ಪನೆಯನ್ನು ಸಾಕಾರಗೊಳಿಸುವುದು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಕನಸಾಗಿತ್ತು.

ಈ ಸದುದ್ದೇಶಗಳನ್ನು ಈಡೇರಿಸಲು ಗ್ರಾಮೀಣ ಪ್ರದೇಶಗಳಲ್ಲಿ ಖಾದಿ ಮತ್ತು ಗ್ರಾಮೋದ್ಯೋಗಗಳಿಗೆ ಆದ್ಯತೆ ನೀಡಿ, ಅವುಗಳ ಸ್ಥಾಪನೆಗೆ ತರಬೇತಿ, ಆರ್ಥಿಕ ಹಾಗೂ ತಾಂತ್ರಿಕ ನೆರವು, ಗ್ರಾಮೀಣ ಕೈಗಳಿಗೆ ನಿರಂತರ ಕೆಲಸ, ಜೀವನಾವಶ್ಯಕ ವಸ್ತುಗಳ ಉತ್ಪಾದನೆ ಹಾಗೂ ಮಾರುಕಟ್ಟೆ, ಗ್ರಾಮೀಣ ಪ್ರದೇಶದ ಆರ್ಥಿಕ ಅಭಿವೃದ್ಧಿ, ಗ್ರಾಮ ಸ್ವರಾಜ್ಯ ಸ್ಥಾಪನೆ, ಗ್ರಾಮೀಣ ಗುಡಿ/ಸಣ್ಣ ಕೈಗಾರಿಕೀಕರಣ ಇವುಗಳ ಮುಖಾಂತರ ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗವಕಾಶಗಳನ್ನು ಕಲ್ಪಿಸಿ, ಗ್ರಾಮೀಣ ಕಸುಬುದಾರರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವುದು ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಪ್ರಮುಖ ಗುರಿಯಾಗಿದೆ.

**ಮಂಡಳಿಯ ರಚನೆ:-**

# ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ

## ಈ ಕೆಳಕಂಡ ಸದಸ್ಯರನ್ನೊಳಗೊಂಡಿದೆ

**2020-21ನೇ ಸಾಲಿನ ಆಡಳಿತ ಮಂಡಳಿಯ ಸದಸ್ಯರ ಪಟ್ಟಿ:-**

**(1-01-2020 ರಿಂದ 27-07-2021 ರವರೆಗೆ ಇದ್ದಂತೆ)**

| ಕ್ರ.ಸ | ಹೆಸರು | ಹುದ್ದೆ |
|---|---|---|
| 1 | **ಶ್ರೀ ಎಂ. ಮಹೇಶ್ವರ್ ರಾವ್ ಭಾ.ಆ.ಸೇ.,**<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು<br>ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ,<br>ಬೆಂಗಳೂರು | ಅಧ್ಯಕ್ಷರು |
| 2 | **ಶ್ರೀ ಜಯವಿಭವ ಸ್ವಾಮಿ ಭಾ.ಆ.ಸೇ**<br>ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,<br>ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ,<br>ಬೆಂಗಳೂರು. | ಸದಸ್ಯ ಕಾರ್ಯದರ್ಶಿಗಳು |
| 3 | **ಶ್ರೀ ಆರ್. ಶ್ರೀನಿವಾಸಲು**<br>ಆರ್ಥಿಕ ಸಲಹೆಗಾರರು ಹಾಗೂ ಮುಖ್ಯ ಲೆಕ್ಕಪತ್ರಾಧಿಕಾರಿಗಳು,<br>ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ,<br>ಬೆಂಗಳೂರು | ಸದಸ್ಯರು |
| 4 | **ಶ್ರೀ ಜೈಕುಮಾರ್ ಹೆಚ್. ಎಸ್.**<br>ಜಂಟಿ ನಿರ್ದೇಶಕರು (ತಾಂತ್ರಿಕ ಕೋಶ),<br>ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸ ಸೌಧ,<br>ಬೆಂಗಳೂರು. | ಸದಸ್ಯರು |
| 5 | **ಶ್ರೀಮತಿ ನಂದಿನಿ. ಬಿ.ಎಸ್.**<br>ಜಂಟಿ ನಿರ್ದೇಶಕರು (ಗ್ರಾಕೈ ಮತ್ತು ಸ್ವಉಕ),<br>ಎಂ.ಎಸ್.ಎಂ.ಇ. ನಿರ್ದೇಶನಾಲಯ, ಖನಿಜ ಭವನ,<br>ಬೆಂಗಳೂರು. | ಸದಸ್ಯರು |
| 6 | **ಶ್ರೀ. ಎಂ.ಜಗನ್ನಾಥ ರಾವ್**<br>ರಾಜ್ಯ ನಿರ್ದೇಶಕರು<br>ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ,<br>ದೂರವಾಣಿ ನಗರ, ಬೆಂಗಳೂರು. | ಸದಸ್ಯರು |
| 7. | **ಶ್ರೀ ಎಂ. ಮಂಜುನಾಥ**<br>ಸರ್ಕಾರದ ಅಧೀನ ಕಾರ್ಯದರ್ಶಿಗಳು (ಬ್ಯಾಂಕಿಂಗ್)<br>ಆರ್ಥಿಕ ಇಲಾಖೆ, 5ನೇ ಹಂತ, ಬಹುಮಹಡಿಗಳ ಕಟ್ಟಡ,<br>ಬೆಂಗಳೂರು. | ಸದಸ್ಯರು |

# ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ

ಖಾದಿ ಭವನ, ನಂ. 10, ಜಸ್ಮಾ ಭವನ ರಸ್ತೆ, ಬೆಂಗಳೂರು – 560 052,

**2020-21ನೇ ಸಾಲಿನ ಆಡಳಿತ ಮಂಡಳಿಯ ಸದಸ್ಯರ ಪಟ್ಟಿ:-**

**(1-01-2020 ರಿಂದ 31-03-2021 ರವರೆಗೆ ಇದ್ದಂತೆ)**

| ಕ್ರ.ಸ | ಹೆಸರು | ಹುದ್ದೆ |
|---|---|---|
| 1 | **ಶ್ರೀ ಕೃಷ್ಣಪ್ಪಗೌಡ ಎನ್.ಆರ್.**<br>ಅಧ್ಯಕ್ಷರು<br>ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ,<br>ಬೆಂಗಳೂರು. | ಅಧ್ಯಕ್ಷರು |
| 2 | **ಶ್ರೀ ಜಯವಿಭವ ಸ್ವಾಮಿ ಭಾ.ಆ.ಸೇ**<br>ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,<br>ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ,<br>ಬೆಂಗಳೂರು. | ಸದಸ್ಯ ಕಾರ್ಯದರ್ಶಿಗಳು |
| 3 | **ಶ್ರೀ ವಿ. ಅಣ್ಣಪ್ಪ**<br>ಪ್ರಭಾರಿ ಆರ್ಥಿಕ ಸಲಹೆಗಾರರು ಹಾಗೂ ಮುಖ್ಯ ಲೆಕ್ಕಪತ್ರಾಧಿಕಾರಿಗಳು,<br>ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ,<br>ಬೆಂಗಳೂರು | ಸದಸ್ಯರು |
| 4 | **ಶ್ರೀ ಜೈಕುಮಾರ್ ಹೆಚ್.ಎಸ್.**<br>ಜಂಟಿ ನಿರ್ದೇಶಕರು (ತಾಂತ್ರಿಕ ಕೋಶ),<br>ವಾಣಿಜ್ಯ ಮತ್ತು ಕೈಗಾರಿಕೆ ಇಖಾಖೆ,<br>ವಿಕಾಸ ಸೌಧ, ಬೆಂಗಳೂರು. | ಸದಸ್ಯರು |
| 5 | **ಶ್ರೀಮತಿ ನಂದಿನಿ. ಬಿ.ಎಸ್.**<br>ಜಂಟಿ ನಿರ್ದೇಶಕರು (ಗ್ರಾಕೈ ಮತ್ತು ಸ್ವಉಕ),<br>ಎಂ.ಎಸ್.ಎಂ.ಇ. ನಿರ್ದೇಶನಾಲಯ,<br>ಖನಿಜ ಭವನ, ಬೆಂಗಳೂರು. | ಸದಸ್ಯರು |
| 6 | **ಶ್ರೀ. ಎಂ.ಜಗನ್ನಾಥ ರಾವ್**<br>ರಾಜ್ಯ ನಿರ್ದೇಶಕರು<br>ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ,<br>ದೂರವಾಣಿ ನಗರ, ಬೆಂಗಳೂರು. | ಸದಸ್ಯರು |
| 7 | **ಶ್ರೀ ಎಂ. ಮಂಜುನಾಥ**<br>ಸರ್ಕಾರದ ಅಧೀನ ಕಾರ್ಯದರ್ಶಿಗಳು (ಬ್ಯಾಂಕಿಂಗ್)<br>ಆರ್ಥಿಕ ಇಲಾಖೆ, 5ನೇ ಹಂತ, ಬಹುಮಹಡಿಗಳ ಕಟ್ಟಡ,<br>ಬೆಂಗಳೂರು. | ಸದಸ್ಯರು |

## 2020-21 ನೇ ಸಾಲಿನಲ್ಲಿ ಮಂಡಳಿಯು ಕೈಗೊಂಡ ಪ್ರಮುಖ ನಿರ್ಧಾರಗಳು:–

**ಸಿಬ್ಬಂದಿ:–**

(ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಲ್ಲಿ ಒಟ್ಟು ಮಂಜೂರಾದ ಸಿಬ್ಬಂದಿ ಸಂಖ್ಯೆ. 355, ದಿನಾಂಕ : 31–03–2021ಕ್ಕೆ ನಿಯೋಜಿತ ಅಧಿಕಾರಿಗಳನ್ನು ಒಳಗೊಂಡಂತೆ ಒಟ್ಟು 89 ಅಧಿಕಾರಿ/ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದು 266 ಹುದ್ದೆಗಳು ಖಾಲಿ ಇರುತ್ತದೆ.) 2020–21ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ನೌಕರರ ಸಂಬಳ ಹಾಗೂ ಇನ್ನಿತರ ವೆಚ್ಚಗಳ ಬಾಬ್ತು ಯೋಜನೇತರ ಬಾಬ್ತಿನಡಿಯಲ್ಲಿ ಮಂಜೂರು ಮಾಡಿದ್ದು ರೂ. 2388.25 (ಎರಡು ಸಾವಿರದ ಮೂರುನೂರ ಎಂಬತ್ತೆಂಟು ಲಕ್ಷ ಇಪ್ಪತ್ತೈದು ಸಾವಿರ ರೂಗಳು ಮಾತ್ರ) ಖಾದಿ ಮಂಡಳಿಯು ಪೂರ್ಣವಾಗಿ ವಿನಿಯೋಗಿಸಿಕೊಂಡಿದೆ.

## ಮಂಡಳಿಯ ಕಾರ್ಯ ಚಟುವಟಿಕೆಗಳು

ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಕಾರ್ಯಚಟುವಟಿಕೆಗಳನ್ನು ಮೂರು ವಲಯಗಳನ್ನಾಗಿ ವಿಂಗಡಿಸಲಾಗಿದೆ.

**1. ಖಾದಿ ವಲಯ 2. ಗ್ರಾಮೋದ್ಯೋಗ ವಲಯ ಹಾಗೂ 3. ಮಾರುಕಟ್ಟೆ ವಲಯ**

### 1. ಖಾದಿ ವಲಯ:–

'ಖಾದಿ ' ಎಂದರೆ 'ಕೈಯಿಂದ ನೂಲಲ್ಪಟ್ಟ ಹಾಗೂ ಕೈಯಿಂದಲೇ ನೇಯಲ್ಪಟ್ಟ ವಸ್ತ್ರ'. ಅನೇಕ ಸಾಂಪ್ರದಾಯಿಕ ಕಸುಬುದಾರರು ರಾಜ್ಯದ ಹಳ್ಳಿಗಾಡುಗಳಲ್ಲಿ ಈ ಖಾದಿ ಉದ್ದಿಮೆಯಲ್ಲಿ ನಿರತರಾಗಿದ್ದಾರೆ. 'ಖಾದಿ' ಎಂದರೆ ಅದರಲ್ಲಿ ಅರಳೆ ಖಾದಿ, ರೇಷ್ಮೆ ಖಾದಿ, ಉಣ್ಣೆ ಖಾದಿ ಹಾಗೂ ಪಾಲಿವಸ್ತ್ರಗಳು ಸಹ ಸೇರಿವೆ.

**ಅ. ಮಾರುಕಟ್ಟೆ ಅಭಿವೃದ್ಧಿ ಸಹಾಯಧನ (ಎಂ.ಡಿ.ಎ)**

ಖಾದಿ ಸಂಘ ಸಂಸ್ಥೆಗಳು ಉತ್ಪಾದಿಸುತ್ತಿರುವ ಖಾದಿ ಉತ್ಪನ್ನಗಳಿಗೆ ಹೆಚ್ಚಿನ ಮಾರುಕಟ್ಟೆ ಒದಗಿಸುವ ದೃಷ್ಟಿಯಿಂದ ಹಾಗೂ ಕಸುಬುದಾರರಿಗೆ ಹೆಚ್ಚಿನ ಉದ್ಯೋಗವಕಾಶ ನೀಡುವ ದೃಷ್ಟಿಯಿಂದ ಕೇಂದ್ರ ಸರ್ಕಾರವು ಮಾರುಕಟ್ಟೆ ಅಭಿವೃದ್ಧಿ ಸಹಾಯಧನ (ಎಂ.ಡಿ.ಎ) ಯೋಜನೆಯನ್ನು ಜಾರಿಗೆ ತಂದಿರುತ್ತದೆ. ಈ ಯೋಜನೆಯಡಿ ಖಾದಿ ಸಂಘ: ಸಂಸ್ಥೆಗಳು ಉತ್ಪಾದಿಸುವ ಖಾದಿ ಉತ್ಪನ್ನಗಳ ಮೇಲೆ ಎಂಡಿಎ ಸಹಾಯಧನವನ್ನು ಅರ್ಹ ಖಾದಿ ಸಂಘ ಸಂಸ್ಥೆಗಳಿಗೆ ನೀಡಲಾಗುವುದು. ಸದರಿ ಎಂಡಿಎ ಪೈಕಿ ಶೇ.25 ರಷ್ಟು ಕಸಬುದಾರರಿಗೆ ನೇರವಾಗಿ ಬಿಡುಗಡೆ ಮಾಡಲಾಗುವುದು. ಶೇ.30% ರಷ್ಟು ಸಂಘ:ಸಂಸ್ಥೆಗಳ ಉತ್ಪಾದನೆಯನ್ನು ಹೆಚ್ಚಿಸುವ ಸಲುವಾಗಿ ಸಲಕರಣೆಗಳ ಖರೀದಿ, ತರಬೇತಿ ಇತ್ಯಾದಿಗಳಿಗಾಗಿ ಹಾಗೂ ಶೇ.45 ರಷ್ಟನ್ನು ಮಾರಾಟದ ವಹಿವಾಟಿಗಾಗಿ ಸಂಘ–ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗುವುದು.

ಕರ್ನಾಟಕ ಸರ್ಕಾರವು ಕೇಂದ್ರ ಸರ್ಕಾರದ ಮಾದರಿಯಲ್ಲೇ ಕೇಂದ್ರ ಸರ್ಕಾರ ನೀಡುವ ಎಂ.ಡಿ.ಎ ಜೊತೆಗೆ ರಾಜ್ಯ ಸರ್ಕಾರ ಈ ಯೋಜನೆಯಡಿ ಶೇ.15 ರಷ್ಟು ಮಾರುಕಟ್ಟೆ ಅಭಿವೃದ್ಧಿ ಸಹಾಯಧನವನ್ನು 2012-13 ರಿಂದ ಘೋಷಿಸಿದೆ. 2020-21ನೇ ಸಾಲಿನಲ್ಲಿ ರೂ.1500.00 ಲಕ್ಷ ಎಂ.ಡಿ.ಎ ರಾಜ್ಯ ಸರ್ಕಾರದಿಂದ ಬಿಡುಗಡೆಯಾಗಿದ್ದು, ಈ ಹಣವನ್ನು 135 ಖಾದಿ ಸಂಘ-ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗಿದೆ.

**ಆ. ಪ್ರೋತ್ಸಾಹ ಮಜೂರಿ:-**

ಕರ್ನಾಟಕ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾದಿ ಸಂಘ ಸಂಸ್ಥೆಗಳು ಉತ್ಪಾದಿಸುತ್ತಿರುವ ಖಾದಿ ಉತ್ಪನ್ನಗಳಿಗೆ ಹೆಚ್ಚಿನ ಮಾರುಕಟ್ಟೆ ಒದಗಿಸುವ ದೃಷ್ಟಿಯಿಂದ ಹಾಗೂ ಕಸುಬುದಾರರಿಗೆ ನಿರಂತರ ಉದ್ಯೋಗವಕಾಶ ನೀಡುವ ದೃಷ್ಟಿಯಿಂದ ರಾಜ್ಯ ಸರ್ಕಾರವು 2013-14 ನೇ ಸಾಲಿನಿಂದ ಪ್ರೋತ್ಸಾಹ ಮಜೂರಿ ಯೋಜನೆಯನ್ನು ಜಾರಿಗೆ ತಂದಿರುತ್ತದೆ. ಈ ಪ್ರೋತ್ಸಾಹ ಮಜೂರಿ ಅನುದಾನವನ್ನು ಖಾದಿ ಸಂಘಸಂಸ್ಥೆಗಳಲ್ಲಿ ದುಡಿಯುತ್ತಿರುವ ನೂಲುಗಾರರು, ನೇಕಾರರು, ಇತರೆ ಕಸಬುದಾರರು ಹಾಗೂ ಖಾದಿ ಕಾರ್ಯಕರ್ತರಿಗೆ ಬಿಡುಗಡೆ ಮಾಡಲಾಗುವುದು.

ಈ ಯೋಜನೆಯಡಿ 2020-21 ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ರೂ.1500.00 ಲಕ್ಷ ಅನುದಾನವನ್ನು ಬಿಡುಗಡೆ ಮಾಡಿದ್ದು, ಈ ಅನುದಾನವನ್ನು ಖಾದಿ ಸಂಘ-ಸಂಸ್ಥೆಗಳಲ್ಲಿ ದುಡಿಯುತ್ತಿರುವ 13413 ಕಸಬುದಾರರಿಗೆ (ನೂಲುಗಾರರು, ನೇಕಾರರು, ಇತರೆ ಕಸಬುದಾರರು ಹಾಗೂ ಖಾದಿ ಕಾರ್ಯಕರ್ತರು) ವಿತರಣೆ ಮಾಡಲಾಗಿದೆ.

**ಇ. ಖಾದಿ ಉದ್ದಿಮೆಯ ಪ್ರಗತಿ (ದಿನಾಂಕ 31-03-2021ರವರೆಗೆ)** **(ರೂ. ಲಕ್ಷಗಳಲ್ಲಿ)**

| ಉದ್ದಿಮೆ | ಉತ್ಪಾದನೆ (ರೂ.ಲಕ್ಷಗಳಲ್ಲಿ) | ಮಾರಾಟ (ರೂ.ಲಕ್ಷಗಳಲ್ಲಿ) | ಉದ್ಯೋಗ (ಸಂಖ್ಯೆ) | ಮಜೂರಿ (ರೂ.ಲಕ್ಷಗಳಲ್ಲಿ) |
|---|---|---|---|---|
| ಅರಳೆ ಖಾದಿ | 5626.00 | 5512.00 | 7305 | 4427.71 |
| ಉಣ್ಣೆ | 1762.75 | 1675.26 | 4872 | 2625.76 |
| ರೇಷ್ಮೆ | 23149.76 | 22455.50 | 3425 | 1986.50 |
| ಪಾಲಿವಸ್ತ್ರ | 1353.59 | 1250.10 | 1506 | 803.48 |
| **ಒಟ್ಟು** | **31892.10** | **30892.86** | **17108** | **9843.45** |

## 2. ಗ್ರಾಮೋದ್ಯೋಗ ವಲಯ

ಖಾದಿ ಆಯೋಗ ನೀಡಿದ ಮಾರ್ಗಸೂಚಿಯಂತೆ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯು **"ಧನಸಹಾಯ ಸ್ವರೂಪ ಯೋಜನೆ"** (1957-58 ರಿಂದ 1994-95 ರವರೆಗೆ) **"ಸಮೂಹ ಬ್ಯಾಂಕ್ ಸಾಲ ಯೋಜನೆ"** (1995-96 ರಿಂದ 1999-2000 ರವರೆಗೆ) (ಗ್ರಾಮೀಣ ಉದ್ಯೋಗ ಸೃಜನ ಯೋಜನೆ (200-01ರಿಂದ 2007-08ರವರೆಗೆ) ಗಳನ್ನು ಅನುಷ್ಠಾನಗೊಳಿಸಲಾಗಿತ್ತು.

ಈ ಯೋಜನೆಯಡಿಯಲ್ಲಿ ಗ್ರಾಮೀಣ ಪ್ರದೇಶದ ಜನರಿಗೆ ಹಣಕಾಸಿನ ನೆರವನ್ನು ನೀಡಿ ಗ್ರಾಮೀಣ ಪ್ರದೇಶದಲ್ಲಿ ಗ್ರಾಮ ಕೈಗಾರಿಕೆಗಳನ್ನು ಸ್ಥಾಪಿಸಿ ಉದ್ಯೋಗಾವಕಾಶವನ್ನು ಕಲ್ಪಿಸಲಾಗಿದೆ. ಧನಸಹಾಯ ಸ್ವರೂಪ ಯೋಜನೆ, ಸಮೂಹ ಬ್ಯಾಂಕ್ ಸಾಲ ಯೋಜನೆ, ಹಾಗೂ ಗ್ರಾಮೀಣ ಉದ್ಯೋಗ ಸೃಷ್ಠಿ ಯೋಜನೆಯಡಿ ಸ್ಥಾಪಿಸಲಾದ ಘಟಕಗಳಿಗೆ ಸಂಬಂಧಿಸಿದ ವಿವರಗಳು ಈ ಕೆಳಗಿನಂತೆ ಇರುತ್ತವೆ.

| ಕ್ರಮ ಸಂಖ್ಯೆ | ಯೋಜನೆ ವಿವರ | ಆರ್ಥಿಕ ನೆರವು ಪಡೆದ ಘಟಕಗಳ ಸಂಖ್ಯೆ | ಕಲ್ಪಿಸಲಾದ ಉದ್ಯೋಗಾವಕಾಶ (ಲಕ್ಷಗಳಲ್ಲಿ) | ಆರ್ಥಿಕ ನೆರವು (ರೂ.ಕೋಟಿಗಳಲ್ಲಿ) | | |
|---|---|---|---|---|---|---|
| | | | | ಸಾಲ | ಸಹಾಯ ಧನ/ ಅಂಚು ಹಣ | ಒಟ್ಟು |
| 1. | ಧನಸಹಾಯ ಸ್ವರೂಪ (1957–58 ರಿಂದ 1994–95) | 21180 | 2.82 | 106.79 | 4.42 | 111.21 |
| 2. | ಸಮೂಹ ಬ್ಯಾಂಕ್ (1995–96 ರಿಂದ 1999–2000 | 2559 | 2.68 | 88.78 | 30.21 | 118.99 |
| 3. | ಗ್ರಾಮೀಣ ಉದ್ಯೋಗ ಸೃಷ್ಟಿ ಯೋಜನೆ (2000–01 ರಿಂದ 2007–08) | 4943 | 0.93 | 0.00 | 54.59 | 54.59 |
| | **ಒಟ್ಟು** | **28682** | **6.43** | **195.57** | **89.22** | **284.79** |

ಈ ಮೇಲ್ಕಂಡ ಮೂರು ಯೋಜನೆಗಳು ಪ್ರಸ್ತುತದಲ್ಲಿ ಜಾರಿಯಲ್ಲಿರುವುದಿಲ್ಲ ಧನಸಹಾಯ ಸ್ವರೂಪ ಯೋಜನೆಯ ಸಾಲ ರೂ.247.46 ಲಕ್ಷಗಳಷ್ಟು ಹಾಗೂ ಸಾಮಾನ್ಯ ಬಡ್ಡಿ ರೂ. 273.33 ಲಕ್ಷ, ಒಟ್ಟು ರೂ. 520.78 ಲಕ್ಷಗಳನ್ನು [ಬಿ.ಪಿ.ಎಲ್. ಯೋಜನೆಯಡಿ] 2020–21ನೇ ಸಾಲಿನಲ್ಲಿ ಖಾದಿ ಆಯೋಗಕ್ಕೆ ಮರುಪಾವತಿ ಮಾಡಲಾಗಿದೆ.

ಧನಸಹಾಯ ಸ್ವರೂಪ ಯೋಜನೆ, ಸಮೂಹ ಬ್ಯಾಂಕ್ ಸಾಲ ಯೋಜನೆ, ಗ್ರಾಮೀಣ **ಉದ್ಯೋಗ ಸೃಷ್ಟಿ ಯೋಜನೆಯಡಿ** ಕಾರ್ಯನಿರ್ವಹಿಸುತ್ತಿರುವ ಘಟಕಗಳ 2020–21ನೇ ಸಾಲಿನ ಸಾಧನೆಯನ್ನು ಕ್ರಮವಾಗಿ ಅನುಬಂಧ (ಎ), ಅನುಬಂಧ (ಬಿ) , ಅನುಬಂಧ (ಸಿ), ಗಳಲ್ಲಿ ವಿವರಿಸಲಾಗಿದೆ.

## ಆ]. ಬಡ್ಡಿ ಸಹಾಯಧನ ಯೋಜನೆ:

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ / ಸಿ.ಐ / 41/ ಎಸ್.ಎಲ್.ವಿ / 2013–14 ಬೆಂಗಳೂರು ದಿನಾಂಕ 30–09–2013 ರ ಆದೇಶದಂತೆ ಬಡ್ಡಿ ಸಹಾಯಧನ ಯೋಜನೆ ಜಾರಿಗೆ ಬಂದಿದ್ದು ಖಾದಿ ಮಂಡಳಿಯಿಂದ (PBS/CBC/PMEGP/REGP) ಯೋಜನೆಗಳಡಿ ಧನಸಹಾಯ ಪಡೆದು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ಫಲಾನುಭವಿ, ಸಂಘ/ಸಂಸ್ಥೆಗಳಿಗೆ ಹೆಚ್ಚುವರಿ ದುಡಿಯುವ ಬಂಡವಾಳ ಅವಶ್ಯಕತೆ ಇರುವ ಫಲಾನುಭವಿ, ಸಂಘ/ಸಂಸ್ಥೆಗಳಿಗೆ ಸರ್ಕಾರದಿಂದ ಶೇ 9 ರಷ್ಟು ಬಡ್ಡಿ ಸಹಾಯಧನವನ್ನು ನೀಡುವ ಮೂಲಕ ಹೆಚ್ಚುವರಿ ದುಡಿಯುವ ಬಂಡವಾಳ ರೂ.3.00 ಲಕ್ಷದವರೆಗೆ ಬ್ಯಾಂಕಿನಿಂದ ಒಪ್ಪಿಗೆ ಪತ್ರ ಪಡೆದು ಬಡ್ಡಿ ಸಹಾಯಧನ ಅರ್ಹತಾ ಪ್ರಮಾಣ ಪತ್ರ ನೀಡಲಾಗುತ್ತಿದೆ. ಸರ್ಕಾರಿ ಆದೇಶ ಸಂಖ್ಯೆ: ಸಿಐ/18/ಎಸ್‌ಎಲ್‌ವಿ/2014 ದಿನಾಂಕ : 02–06–2014 ರಂತೆ ರಾಜ್ಯದ 176 ತಾಲ್ಲೂಕುಗಳಿಗೆ ಈ ಯೋಜನೆ ಅನ್ವಯಿಸುತ್ತದೆ. ಈ ಯೋಜನೆಯು 3 ವರ್ಷಗಳವರೆಗೆ ಮಾತ್ರ ಸೀಮಿತವಾಗಿದ್ದು, ಮುಂದುವರೆದ ಯೋಜನೆಯಾಗಿರುತ್ತದೆ.

## ಈ ಪ್ರಧಾನ ಮಂತ್ರಿಗಳ ಉದ್ಯೋಗ ಸೃಷ್ಠಿ ಯೋಜನೆ (ಪ್ರಸ್ತುತ ಚಾಲ್ತಿಯಲ್ಲಿರುವ ಯೋಜನೆ)

ಎ. ಭಾರತ ಸರ್ಕಾರವು, ಗ್ರಾಮೀಣ ಕಸುಬುದಾರರಿಗೆ ಹೆಚ್ಚಿನ ರೀತಿಯ ಉದ್ಯೋಗಾವಕಾಶಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ದಿನಾಂಕ: 15–09–2008 ರಿಂದ ಪ್ರಧಾನ ಮಂತ್ರಿಗಳ ಉದ್ಯೋಗ ಸೃಷ್ಠಿ ಯೋಜನೆಯನ್ನು ಜಾರಿಗೆ ತಂದಿದೆ. ಉದ್ದಿಮೆದಾರರು ತಮ್ಮದೇ ಆದ ಯೋಜನೆಯಂತೆ ಸ್ಥಾಪಿಸುವ ಘಟಕಗಳಿಗೆ ಬ್ಯಾಂಕಿನಿಂದ ಸಾಲ ಹಾಗೂ ಖಾದಿ ಆಯೋಗದಿಂದ ಅಂಚು ಹಣವನ್ನು ನೀಡಲಾಗುವುದು. ಘಟಕವನ್ನು ಮೂರು (3) ವರ್ಷಗಳ ಕಾಲ ಯಶಸ್ವಿಯಾಗಿ ನಡೆಸಿದ ನಂತರವೇ ಈ ಅಂಚು ಹಣವನ್ನು ಉದ್ದಿಮೆದಾರನ ಸಾಲದ ಖಾತೆಗೆ ಹೊಂದಾಣಿಕೆ ಮಾಡಿ ಕೊಳ್ಳಲಾಗುವುದು.

* ಭಾರತ ಸರ್ಕಾರದ ಎಂ.ಎಸ್.ಎಂ.ಇ. ಇಲಾಖೆಯು ಈ ಯೋಜನೆಯನ್ನು ರೂಪಿಸಿ ಮಾರ್ಗಸೂಚಿಯನ್ನು ಬಿಡುಗಡೆ ಮಾಡಿರುತ್ತದೆ. ಖಾದಿ ಮತ್ತು ಗ್ರಾಮೋದ್ಯೋಗ ಆಯೋಗವು ರಾಷ್ಟ್ರೀಯ ನೋಡಲ್ ಏಜೆನ್ಸಿಯಾಗಿದ್ದು, ಈ ಯೋಜನೆಯನ್ನು ರಾಜ್ಯ ಮಟ್ಟದಲ್ಲಿ (1) ಖಾದಿ ಆಯೋಗ (2) ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಮತ್ತು (3) ಜಿಲ್ಲಾ ಕೈಗಾರಿಕಾ ಕೇಂದ್ರಗಳಿಂದ ಅನುಷ್ಠಾನಗೊಳಿಸಲಾಗುತ್ತಿದೆ.

* ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಏಜೆನ್ಸಿಗಳ / ಬ್ಯಾಂಕುಗಳ ಪ್ರಗತಿಯನ್ನು ಪರಿಶೀಲಿಸಲು / ನಿಯಂತ್ರಿಸಲು ರಾಜ್ಯಮಟ್ಟದಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಇವರ ಅಧ್ಯಕ್ಷತೆಯಲ್ಲಿ 'ಸ್ಟೇಟ್ ಲೆವಲ್ ಮಾನಿಟರಿಂಗ್' ಸಮಿತಿಯನ್ನು ಹಾಗೂ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು/ಜಿಲ್ಲಾ ಮ್ಯಾಜಿಸ್ಟ್ರೇಟ್ ರವರ ಅಧ್ಯಕ್ಷತೆಯಲ್ಲಿ 'ಜಿಲ್ಲಾ ಟಾಸ್ಕ್ ಫೋರ್ಸ್' ಸಮಿತಿಯನ್ನು ರಚಿಸಲಾಗಿದೆ.

### ಈ ಯೋಜನೆಯ ರೂಪುರೇಷೆಗಳು ಕೆಳಕಂಡಂತಿದೆ

| | | |
|---|---|---|
| 1 | ಉದ್ದಿಮೆದಾರರ ಸ್ವಂತ ಬಂಡವಾಳ ಹೂಡಿಕೆ | ಉದ್ದಿಮೆದಾರರು ಸಾಮಾನ್ಯ ವರ್ಗಕ್ಕೆ ಸೇರಿದವರಾದಲ್ಲಿ ಯೋಜನಾ ವೆಚ್ಚದ ಶೇ. 10 ರಷ್ಟು/ವಿಶೇಷ ವರ್ಗಕ್ಕೆ ಸೇರಿದವರಾದಲ್ಲಿ ಯೋಜನಾ ವೆಚ್ಚದ ಶೇ. 5 ರಷ್ಟು ಸ್ವಂತ ಬಂಡವಾಳ ಹೂಡಿಕೆ ಮೊತ್ತವನ್ನು, ಮೊದಲನೆ ಕಂತಿನ ಸಾಲವನ್ನು ಬಿಡುಗಡೆ ಮಾಡಿಸಿಕೊಳ್ಳುವ ಮುನ್ನ ಬ್ಯಾಂಕಿನಲ್ಲಿನ ಉದ್ದಿಮೆದಾರನ ಖಾತೆಯಲ್ಲಿ ಇಟ್ಟಿರಬೇಕು |
| 2 | ವಿದ್ಯಾರ್ಹತೆ | ರೂ. 10.00 ಲಕ್ಷಕ್ಕೂ ಮೇಲ್ಪಟ್ಟು ಕೈಗೊಳ್ಳುವ ಉತ್ಪಾದನಾ ಘಟಕಗಳು ಹಾಗೂ ರೂ. 5.00 ಲಕ್ಷದಿಂದ ರೂ. 10.00 ಲಕ್ಷದವರೆಗಿನ ಸೇವಾ ಘಟಕಗಳನ್ನು ಸ್ಥಾಪಿಸುವ ಉದ್ದಿಮೆದಾರರು ಕನಿಷ್ಠ 8ನೇ ತರಗತಿಯಲ್ಲಿ ತೇರ್ಗಡೆ ಹೊಂದಿರಬೇಕು. |
| 3 | ಇ.ಡಿ.ಪಿ. ತರಬೇತಿ | ಅಂಗೀಕೃತ ತರಬೇತಿ ಕೇಂದ್ರಗಳಲ್ಲಿ ಎರಡು ವಾರಗಳ ಉದ್ಯಮ ಶೀಲತಾ ಅಭಿವೃದ್ಧಿ ತರಬೇತಿಯನ್ನು ಬ್ಯಾಂಕುಗಳಿಂದ ಮೊದಲ ಕಂತು ಸಾಲ ಬಿಡುಗಡೆಯಾಗುವ ಮುನ್ನ ಕಡ್ಡಾಯವಾಗಿ ಪಡೆಯ ಬೇಕಾಗುತ್ತದೆ. |
| 4 | ಗ್ರಾಮೀಣ ಪ್ರದೇಶದ ವ್ಯಾಖ್ಯೆ | ಕಂದಾಯ ಗ್ರಾಮ ಅಥವಾ 20,000ಕ್ಕೂ ಕಡಿಮೆ ಜನಸಂಖ್ಯೆಯನ್ನು ಹೊಂದಿರುವ ಪಟ್ಟಣ ಪ್ರದೇಶ/ಗ್ರಾಮೀಣ ಪ್ರದೇಶಗಳಲ್ಲಿ ಈ ಯೋಜನೆ ಕೈಗೊಳ್ಳಲು ಅವಕಾಶವಿದೆ. |

| | | |
|---|---|---|
| 5 | ಗ್ರಾಮ ಕೈಗಾರಿಕೆಗಳ ಬಗ್ಗೆ ವ್ಯಾಖ್ಯೆ | ಗ್ರಾಮೀಣ ಪ್ರದೇಶದಲ್ಲಿ ಸ್ಥಾಪಿತವಾಗುವ ಋಣಾತ್ಮಕ ಪಟ್ಟಿಯಲ್ಲಿಲ್ಲದ ಯಾವುದೇ ಉದ್ದಿಮೆ ಅಥವಾ ಸೇವಾ ಘಟಕಗಳಿಗೆ ಅವಕಾಶವಿದೆ.<br>ಅಂಚು ಹಣ ಯೋಜನೆ ಸೌಲಭ್ಯವು ಯಾವುದೇ ಹಳೆಯ ಘಟಕಗಳಿಗೆ ಈ ಯೋಜನೆಯಲ್ಲಿ ಅವಕಾಶವಿರುವುದಿಲ್ಲ. |
| 6 | ತಲಾ ಹೂಡಿಕೆ ಬಂಡವಾಳ | ಯೋಜನಾ ವೆಚ್ಚದಲ್ಲಿ ನಿಗದಿಪಡಿಸಿದ ಬಂಡವಾಳ ವೆಚ್ಚವು ಪ್ರತಿ 1.00 ಲಕ್ಷ ರೂಪಾಯಿಗಳ ಹೂಡಿಕೆಗೆ ಒಂದು ಉದ್ಯೋಗಾವಕಾಶವನ್ನು ಕಲ್ಪಿಸಬೇಕು. |
| 7 | ಯೋಜನಾವೆಚ್ಚದ ಗರಿಷ್ಠ ಮಿತಿ | ಉತ್ಪಾದನಾ ಘಟಕಗಳಿಗೆ ಗರಿಷ್ಠ ರೂ. 25.00 ಲಕ್ಷಗಳು ಹಾಗೂ ಸೇವಾ ಘಟಕಗಳಿಗೆ ಗರಿಷ್ಠ ರೂ. 10.00 ಲಕ್ಷಗಳ ಯೋಜನಾ ವೆಚ್ಚಕ್ಕೆ ಮಾತ್ರ ಅವಕಾಶವಿದೆ. |

ಈ ಯೋಜನೆಯಡಿಯಲ್ಲಿ ಖಾದಿ ಆಯೋಗದಿಂದ ಅನುಮೋದಿತವಾದ ಆಯ್ದ (ಅಂದರೆ ರಾಜ್ಯ ಸ್ಟೇಟ್ ಲೆವೆಲ್ ಮಾನಿಟರಿಂಗ್ ಸಮಿತಿಯಿಂದ ಅನುಮೋದನೆ ಪಡೆದ) ರಾಷ್ಟ್ರೀಕೃತ ಬ್ಯಾಂಕುಗಳು, ಖಾಸಗಿ ಷೆಡ್ಯೂಲ್ಡ್ ಬ್ಯಾಂಕುಗಳು, ಗ್ರಾಮೀಣ ಬ್ಯಾಂಕ್‌ಗಳು ಹಾಗೂ ಆಯ್ದ ಸಹಕಾರಿ ಬ್ಯಾಂಕುಗಳಿಂದ ಸಾಲ ಪಡೆದಲ್ಲಿ ಮಾತ್ರ ಅಂಚು ಹಣದ ಸೌಲಭ್ಯವನ್ನು ಪಡೆಯಬಹುದಾಗಿದೆ.

➢ **ಅಂಚು ಹಣ ಸೌಲಭ್ಯದ ವಿವರ ಈ ಕೆಳಗಿನಂತಿದೆ.**

1. ಗ್ರಾಮೀಣ ಪ್ರದೇಶದ ಸಾಮಾನ್ಯ ವರ್ಗಕ್ಕೆ ಯೋಜನಾ ವೆಚ್ಚದ ಶೇ.25ರಷ್ಟು ಮತ್ತು ವಿಶೇಷ ವರ್ಗಗಳಿಗೆ ಅಂದರೆ ಪರಿಶಿಷ್ಟ ಜಾತಿ/ಪಂಗಡ/ಹಿಂದುಳಿದ ವರ್ಗಗಳು/ಮಾಜಿ ಸೈನಿಕರು/ ಅಂಗವಿಕಲರು/ ಮಹಿಳೆಯರು/ ಅಲ್ಪಸಂಖ್ಯಾತರಿಗೆ ಶೇ.35 ರಷ್ಟು ಅಂಚು ಹಣ ಪಡೆಯಲು ಅರ್ಹತೆ ಇದೆ. (ನಗರ ಪ್ರದೇಶ ಸಾಮಾನ್ಯ ವರ್ಗಕ್ಕೆ ಶೇ. 15 ಹಾಗೂ ವಿಶೇಷ ವರ್ಗಕ್ಕೆ ಶೇ.25)
2. ಈ ಯೋಜನೆಯಡಿ ಉದ್ದಿಮೆದಾರರು ವಿಶೇಷ ವರ್ಗಕ್ಕೆ ಸೇರಿದವರು ಯೋಜನಾ ವೆಚ್ಚದ ಶೇ.5 ರಷ್ಟು ಹಾಗೂ ಸಾಮಾನ್ಯ ವರ್ಗದವರು ಶೇ.10 ರಷ್ಟು ಸ್ವಂತ ಬಂಡವಾಳವನ್ನು ಹೂಡಬೇಕಾಗುತ್ತದೆ.
3. ಬ್ಯಾಂಕುಗಳು ಉದ್ದಿಮೆದಾರಿಗೆ ಸಾಲ ಮಂಜೂರು ಮಾಡಿ ಮೊದಲನೆ ಕಂತಿನ ಹಣ ಬಿಡುಗಡೆ ಮಾಡಿದ ನಂತರ ಬ್ಯಾಂಕ್‌ಗಳು ಅಂಚುಹಣ (ಮಿಡಲ್ ಎಂಡ್ ಸಬ್ಸಿಡಿ) ಕ್ಲೈಮ್ ಮಾಡಿ ಅಂಚು ಹಣವನ್ನು ಉದ್ದಿಮೆದಾರರ ಹೆಸರಿನಲ್ಲಿ ಟಿ. ಡಿ. ಆರ್. ಖಾತೆಯಲ್ಲಿ 3 ವರ್ಷ ಠೇವಣಿ ಇಡಬೇಕಾಗಿರುತ್ತದೆ. ಘಟಕ ಕೆಲಸ ಮಾಡುವುದನ್ನು ಮೂರನೇ ಏಜೆನ್ಸಿಯವರಯ ಪರಿಶೀಲಿಸಿ ವರದಿ ನೀಡಿದ ನಂತರ ಉದ್ದಿಮೆದಾರರ ಸಾಲದ ಖಾತೆಗೆ ಜಮಾ ಮಾಡಿಕೊಳ್ಳಲು ತಿಳಿಸಲಾಗುವುದು. ಟಿ.ಡಿ.ಆರ್. ಖಾತೆಯಲ್ಲಿ ಇಟ್ಟ ಹಣಕ್ಕೆ ಬ್ಯಾಂಕ್‌ಗಳು ಬಡ್ಡಿ ನೀಡಬೇಕಾಗಿಲ್ಲ ಹಾಗೂ ಉದ್ದಿಮೆದಾರರಿಗೆ ನೀಡಿದ ಅಷ್ಟೆ ಮೊತ್ತದ ಸಾಲದ ಹಣಕ್ಕೂ ಬ್ಯಾಂಕ್ ಬಡ್ಡಿ ವಿಧಿಸುವಂತಿಲ್ಲ.

ಈ ಯೋಜನೆಯ ಹೆಚ್ಚಿನ ವಿವರಗಳನ್ನು ಖಾದಿ ಆಯೋಗದ ವೆಬ್‌ಸೈಟ್ www.pmegp.in ನಲ್ಲಿ ಪಡೆಯಬಹುದಾಗಿದೆ. ಈ ಯೋಜನೆಯಡಿ ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕಾಗಿದೆ. ಈ ಯೋಜನೆ ಯಡಿ ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ವೆಬ್‌ಸೈಟ್ www.kvionline.comನಲ್ಲಿ ವಿವರ ಪಡೆಯಬಹುದಾಗಿದೆ.

**ಬಿ. 2020–21 ನೇ ಸಾಲಿನಲ್ಲಿ ಪಿ.ಎಂ.ಇ.ಜಿ.ಪಿ. ಯೋಜನೆಯಡಿಯಲ್ಲಿ ಸಾಧನೆಗಳು:**

202021ನೇ ಸಾಲಿನಲ್ಲಿ ಈ ಯೋಜನೆಯಡಿಯಲ್ಲಿ 1117 ಘಟಕಗಳನ್ನು ಸ್ಥಾಪಿಸಲಾಗಿದ್ದು, ರೂ.2756.44 ಲಕ್ಷ ಅಂಚು ಹಣದ ಬಳಕೆಯಾಗಿದ್ದು 10288 ಮಂದಿ ಕಸಬುದಾರರಿಗೆ ಉದ್ಯೋಗಾವಕಾಶ ನೀಡಲಾಗಿದೆ.

➢ ಈ ಯೋಜನೆಯ ಜಿಲ್ಲಾವಾರು ಸಾಧನೆಯ ವಿವರಗಳನ್ನು ಅನುಬಂಧ "ಡಿ" ಮತ್ತು "ಇ" ಯಲ್ಲಿ ವಿವರಿಸಲಾಗಿದೆ.

3. **ಮಾರುಕಟ್ಟೆ ವಲಯ**

ಖಾದಿ ಮತ್ತು ಗ್ರಾಮೋದ್ಯೋಗ ಘಟಕಗಳು ಉತ್ಪಾದಿಸುವ ಉತ್ಪನ್ನಗಳು ಪರಿಸರ ಸ್ನೇಹಿ, ನೈಜ, ಆರೋಗ್ಯಕರ, ಉತ್ಕೃಷ್ಟ ಜೀವನಾವಶ್ಯಕ ವಸ್ತುಗಳಾಗಿದ್ದು, ಇತ್ತೀಚಿನ ದಿನಗಳಲ್ಲಿ ಈ ಉತ್ಪನ್ನಗಳು ನಗರ ಪ್ರದೇಶಗಳ ಜನತೆಯ ಅದರಲ್ಲೂ ವಿಶೇಷವಾಗಿ ಯುವ ಜನಾಂಗದ ಆಕರ್ಷಣೆಗೆ ಒಳಪಟ್ಟಿದೆ. ಗ್ರಾಹಕರ ಆಕಾಂಕ್ಷೆಗಳಿಗೆ ಸ್ಪಂದಿಸಿ ವಿವಿಧ ವಿನ್ಯಾಸಗಳ ಆಧುನಿಕ ಸಿದ್ಧ ಉಡುಪುಗಳನ್ನು ತಯಾರಿಸಲು ಖಾದಿ ಆಯೋಗದ ನೆರವಿನಿಂದ ಖಾದಿ ಸಂಘ/ ಸಂಸ್ಥೆಯ ಕಸಬುದಾರರಿಗೆ ತರಬೇತಿ ನೀಡಲಾಗಿದೆ. ಅಲ್ಲದೆ ಮಾರುಕಟ್ಟೆ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮ ಗಳನ್ನು ಹಮ್ಮಿಕೊಳ್ಳಲಾಗಿದೆ.

ಈ ಮಾರುಕಟ್ಟೆ ಪೈಪೋಟಿ ವ್ಯವಸ್ಥೆಯಲ್ಲಿ ಗ್ರಾಹಕರ ಅಪೇಕ್ಷೆಗಳಿಗೆ ಅನುಸಾರವಾಗಿ ನೂತನ ವಿನ್ಯಾಸದ, ವಿನೂತನ ಮಾದರಿಯ ಹಾಗೂ ಆಕರ್ಷಕ ಪ್ಯಾಕಿಂಗ್ ಅಳವಡಿಸಿಕೊಳ್ಳಲು ಈ ಕ್ಷೇತ್ರದ ಉದ್ದಿಮೆದಾರರನ್ನು/ಸಂಘ ಸಂಸ್ಥೆಗಳನ್ನು ಉತ್ತೇಜಿಸಲಾಗುತ್ತಿದೆ ಹಾಗೂ ಈ ಉತ್ಪನ್ನಗಳ ಮಾರುಕಟ್ಟೆಗಾಗಿ ವ್ಯಾಪಕ ಪ್ರಚಾರ ನೀಡಲಾಗುತ್ತಿದೆ.

**ಅ. ವಸ್ತು ಪ್ರದರ್ಶನಗಳು:**

2020–21ನೇ ಸಾಲಿನಲ್ಲಿ ಕೋವಿಡ್ – 19 ವೈರಾಣುವಿನಿಂದಾಗಿ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ವತಿಯಿಂದ ಯಾವುದೇ ವಸ್ತು ಪ್ರದರ್ಶನವನ್ನು ನಡೆಸಿರುವುದಿಲ್ಲ.

**ಆ. ಪ್ರಚಾರ:–**

ಖಾದಿ ಗ್ರಾಮೋದ್ಯೋಗ ಚಟುವಟಿಕೆಗಳಿಗೆ ಹಾಗೂ ಉತ್ಪನ್ನಗಳಿಗೆ ವ್ಯಾಪಕ ಪ್ರಚಾರ ನೀಡಲು ವಸ್ತು ಪ್ರದರ್ಶನದ ಸಮಯದಲ್ಲಿ ದಿನ ಪತ್ರಿಕೆ, ಮಾಸ ಪತ್ರಿಕೆಗಳಲ್ಲಿ ಹಾಗೂ ದೂರದರ್ಶನ ಹಾಗೂ ಆಕಾಶವಾಣಿ ಮುಂತಾದ ಮಾಧ್ಯಮಗಳಲ್ಲಿ ಜಾಹಿರಾತುಗಳನ್ನು ನೀಡಲಾಗುತ್ತದೆ. ಇದರಿಂದ ಖಾದಿ ಮತ್ತು ಗ್ರಾಮೋದ್ಯೋಗ ಉತ್ಪನ್ನಗಳಿಗೆ ಹೆಚ್ಚಿನ ಪ್ರಚಾರ ದೊರೆಯುತ್ತದೆ. ಅಲ್ಲದೆ ವಸ್ತು ಪ್ರದರ್ಶನದಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಉತ್ಪನ್ನಗಳು ಹೆಚ್ಚಾಗಿ ಮಾರಾಟವಾಗುತ್ತವೆ. ಇದರಿಂದ ಖಾದಿ ಸಂಘ–ಸಂಸ್ಥೆಗಳು ಹಾಗೂ ಗ್ರಾಮೋದ್ಯೋಗ ಘಟಕಗಳಿಗೆ ಉತ್ತಮವಾದ ಮಾರುಕಟ್ಟೆ ಸೌಲಭ್ಯ ದೊರೆತಂತಾಗುತ್ತದೆ ಹಾಗೂ ಗ್ರಾಮೀಣ ಭಾಗದಲ್ಲಿ ನಿರಂತರವಾಗಿ ಉದ್ಯೋಗವನ್ನು ನೀಡಲು ಅನುಕೂಲವಾಗುತ್ತದೆ.

**ಇ."ಕರ್ನಾಟಕ ಖಾದಿ ಬ್ರಾಂಡಿಂಗ್" ಯೋಜನೆ:–**

ಖಾದಿ ಕ್ಷೇತ್ರವು ಯುವ ಜನರನ್ನು ಆಕರ್ಷಿಸಲು ಹಾಗೂ ಮಾರುಕಟ್ಟೆಯ ಸ್ಪರ್ಧೆಗಳಿಗೆ ಅನುಗುಣವಾಗಿ ಬೆಳೆಯಲು ಅಗತ್ಯವಾದ ಕ್ರಮ ಕೈಗೊಳ್ಳಲು ಕರ್ನಾಟಕ ಸರ್ಕಾರವು 2016–17 ನೇ ಸಾಲಿನಲ್ಲಿ ಕರ್ನಾಟಕ ಖಾದಿ ಬ್ರಾಂಡಿಂಗ್ ಯೋಜನೆಯನ್ನು ನ್ಯಾಷನಲ್ ಇನ್ಸ್‌ಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ (NIFT) ಸಂಸ್ಥೆಯ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲು ಹಾಗೂ ಅಗತ್ಯವಾದ ಅರ್ಥಿಕ ನೆರವನ್ನು ನೀಡಲು ಅನುಮೋದನೆ ನೀಡಿರುತ್ತದೆ. ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ವಿವಿಧ ಹಂತಗಳಲ್ಲಿ ಸರ್ಕಾರದ, ನಿಫ್ಟ್ ಸಂಸ್ಥೆಯ ಮತ್ತು

ಖಾದಿ ಮಂಡಳಿ ಮತ್ತು ರಾಜ್ಯದ ಖಾದಿ ಸಂಘ ಸಂಸ್ಥೆಗಳ ಸಭೆಗಳನ್ನು ಹಲವಾರು ಬಾರಿ ಈಗಾಗಲೇ ನಡೆಸಲಾಗಿರುತ್ತದೆ.

ನಂತರದಲ್ಲಿ ನ್ಯಾಷನಲ್ ಇನ್ಸ್ಟ್ಯೂಟ್ ಆಫ್ ಫ್ಯಾಶನ್ ಟೆಕ್ನಾಲಜಿ (NIFT) ಸಂಸ್ಥೆಯೊಂದಿಗೆ 2016–17 ನೇ ಸಾಲಿನ ವರ್ಷದ ಅಂತ್ಯದಲ್ಲಿ ಯೋಜನೆ ಅನುಷ್ಠಾನಗೊಳಿಸಲು ಒಡಂಬಡಿಕೆ (MOU) ಮಾಡಿಕೊಳ್ಳಲಾಗಿದೆ ಅದರಂತೆ ಪ್ರಥಮ ಹಂತವಾಗಿ ನಿಫ್ಟ್ ಸಂಸ್ಥೆಯವರು Diagnostic Study Report ಸಲ್ಲಿಸಿದ್ದು ಅದನ್ನು ಪರಿಷ್ಕರಿಸಿ Revised Study Report ಸಲ್ಲಿಸಿದ್ದು ಅದರಲ್ಲಿ ಖಾದಿ ಸಂಘ ಸಂಸ್ಥೆಗಳು ಉತ್ಪಾದಿಸುವ ಉತ್ಪನ್ನಗಳ ಬಗ್ಗೆ ಮಾಹಿತಿಯನ್ನು ನೀಡಿರುತ್ತಾರೆ. ಖಾದಿ ಬ್ರಾಂಡಿಂಗ್ ಯೋಜನೆಯ ಬಗ್ಗೆ ಮಾಹಿತಿಯನ್ನು ನೀಡಿರುತ್ತಾರೆ. ಖಾದಿ ಬ್ರಾಂಡಿಂಗ್ ಯೋಜನೆಯ ಬಗ್ಗೆ ಸಂಬಂಧಪಟ್ಟ Home fashion, corporate gift, apparels ಮತ್ತು Accessories ವಿಭಾಗಗಳ 400 ಕ್ಕೂ ಹೆಚ್ಚು ಹೊಸ ವಿನ್ಯಾಸಗಳನ್ನು ಪ್ರದರ್ಶಿಸಿದ್ದು ಅವುಗಳನ್ನು ನಿಫ್ಟ್ ಸಂಸ್ಥೆಯ ವಾರ್ಷಿಕ ದಿನಾಚರಣೆ ಸಂದರ್ಭದಲ್ಲಿ ಅಂದಿನ ಕರ್ನಾಟಕ ಸರ್ಕಾರದ ಮಾನ್ಯ ಸಣ್ಣ ಕೈಗಾರಿಕೆ ಸಚಿವರು ವಿನ್ಯಾಸಗಳ ಪ್ರದರ್ಶನವನ್ನು ಉದ್ಘಾಟನೆ ಮಾಡಿರುತ್ತಾರೆ. ಖಾದಿ ಬ್ರಾಂಡಿಂಗ್ ಉಡುಪುಗಳನ್ನು (ನವ ವಿನ್ಯಾಸ) ತಯಾರಿಸಲು ಖಾದಿ ಸಂಘ ಸಂಸ್ಥೆಗಳ 464 ನುರಿತ ಟೈಲರ್‌ಗಳಿಗೆ ಹಾಗೂ ಕ್ರಿಯಾಶೀಲ ಕಾರ್ಯಕರ್ತರಿಗೆ ನಿಫ್ಟ್ ಸಂಸ್ಥೆಯಿಂದ 03 ಹಂತಗಳಲ್ಲಿ ತರಬೇತಿಯನ್ನು ನೀಡಲಾಗಿರುತ್ತದೆ.

ಸದರಿ ಯೋಜನೆಯ ಅವಧಿಯು ದಿನಾಂಕ 31–12–2019ಕ್ಕೆ ಮುಕ್ತಾಯವಾಗಿರುತ್ತದೆ. ಆದ್ದರಿಂದ ಯೋಜನೆಯ ಅವಧಿಯನ್ನು ದಿನಾಂಕ 31–12–2021ರವರೆಗೆ ವಿಸ್ತರಿಸಲು ಸರ್ಕಾರದ ಅನುಮತಿ ಕೋರಲಾಗಿರುತ್ತದೆ. ಹಾಗೂ ಈ ಯೋಜನೆಗೆ ಬಿಡುಗಡೆ ಆಗಬೇಕಾದ ಬಾಕಿ ಹಣ ರೂ. 1,50,84,000/–ಗಳನ್ನು ಬಿಡುಗಡೆ ಮಾಡುವಂತೆ ಕೋರಿ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಅದರಂತೆ ಸರ್ಕಾರದಿಂದ ರೂ. 15000 ಲಕ್ಷಗಳ ಹಣ ಬಿಡುಗಡೆಯಾಗಿರುತ್ತದೆ. ಸದರಿ ಯೋಜನೆಯನ್ನು ಮುಂದುವರೆಸುವ ಕುರಿತಂತೆ ದಿನಾಂಕ 5–1–2023ರಂದು 12.00 ಗಂಟೆಗೆ ಸರ್ಕಾರದ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇವರ ಅಧ್ಯಕ್ಷತೆಯಲ್ಲಿ ವಿಡಿಯೋ

## ರಾಜ್ಯ ಸರ್ಕಾರದ ಅನುದಾನದ ನೆರವುಗಳು:

ಕರ್ನಾಟಕ ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಗೆ 2020–21ನೇ ಸಾಲಿನಲ್ಲಿ ಈ ಕೆಳಗಿನಂತೆ ಅನುದಾನದ ನೆರವು ನೀಡಿರುತ್ತದೆ.

(ರೂ. ಲಕ್ಷಗಳಲ್ಲಿ)

| ಕ್ರ.ಸಂ | ವಿವರ | ಕರ್ನಾಟಕ ಸರ್ಕಾರದಿಂದ ಹಂಚಿಕೆಯಾದ ಮೊತ್ತ. | ಕರ್ನಾಟಕ ಸರ್ಕಾರದಿಂದ ಬಿಡುಗಡೆಯಾದ ಮೊತ್ತ | 2020–21 ನೇ ಸಾಲಿನಲ್ಲಿ ಭರಿಸಲಾದ ವೆಚ್ಚ |
|---|---|---|---|---|
| 1 | ಯೋಜನೇತರ | 2388.25 | 2388.25 | 2388.25 |
| 2 | ಯೋಜನೆ (ಮಾರುಕಟ್ಟೆ ಅಭಿವೃದ್ಧಿ ಸಹಾಯಧನ ಹಾಗೂ ಪ್ರೋತ್ಸಾಹ ಮಜೂರಿ) | 3000.00 | 3000.00 | 3000.00 |
| 3 | ವಸ್ತು ಪ್ರದರ್ಶನ | – | – | – |
| | **ಒಟ್ಟು** | **5388.25** | **5388.25** | **5388.25** |

# ANNUAL REPORT

# OF

# 2020 - 21

# KARNATAKA STATE
# KHADI AND VILLAGE INDUSTRIES BOARD

Khadi Bhavan, No 10, Jasma Bhavan Road, Vasanthanagar, Bengalore - 560 052.

## ANNUAL REPORT OF 2020-21

Karnataka state Khadi and village industries Board came into existence under the Karnataka khadi and village industries Act - 1957 (Karnataka Act of 1957). The Board was established to organise, develop and regulate khadi and village industries activities in the state of Karnataka

## OBJECTIVES :

The main objectives of KVIB is to give priority for Khadi and Village industries in rural areas and to develop, provide financial assistance, generate employment opportunities in rural areas and improve the economic status of the rural artisans.

# CONSTITUTION OF THE BOARD:-

**The Karnataka State Khadi & Village Industries Board**
**has the following members.**

## 2020-21 Board Members List

**(1 - 01 - 2020 To 27-07-2020)**

| Sl.No. | Name | Designation |
|---|---|---|
| 1. | **Sri M. Maheshwar Rao I.A.S**<br>Secretary to Government<br>Commerce & Industries Department,<br>Vikasa Soudha, Bangalore. | **Chairman** |
| 2. | **Sri Jayavibhava Swamy I.A.S**<br>Chief Executive Officer,<br>Karnataka State Khadi and Village Industries Board,<br>Bangalore. | **Member Secretary** |
| 3. | **Sri R. Srinivasalu**<br>Financial Advisor and Chief Accounts Officer,<br>Karnataka State Khadi and Village<br>Industries Board, Bangalore. | **Member** |
| 4. | **Sri H.S. Jaikumar**<br>Joint Director (Technical cell),<br>Commerce & Industries Department,<br>Vikasa Soudha, Bangalore. | **Member** |
| 5. | **Smt B.S. Nandini**<br>Joint Director (VI & SEP),<br>Industries & Commerce Department,<br>Khanija Bhavan, Bangalore. | **Member** |
| 6. | **Sri M. Jagganatha Rao**<br>State Director,<br>Khadi and Village Industries Commission,<br>Doorvani Nagar, Bangalore. | **Member** |
| 7. | **Sri M. Manjunatha**<br>Govt Under Secrectary (Banking)<br>Finance Department,5th Stage,<br>M.S.Building, Bangalore | **Member** |

# The Karnataka State Khadi & Village Industries Board

Khadi Bhavan, No. 10, Jasma Bhavan Road, Bangalore-560 052.

## 2020-21 Board Members List

## (1 - 01 - 2020 To 31-03-2021)

| Sl.No. | Name | Designation |
|---|---|---|
| 1. | **Sri Krishnappagowda N.R.**<br>Secretary to Government<br>Commerce & Industries Department,<br>Vikasa Soudha, Bangalore. | **Chairman** |
| 2. | **Sri Jayavibhava Swamy I.A.S**<br>Chief Executive Officer,<br>Karnataka State Khadi and Village Industries Board,<br>Bangalore. | **Member Secretary** |
| 3. | **Sri S. V. Annappa**<br>Financial Advisors Incharge and Chief Accountants<br>Karnataka State Khadi and Village Industries Board,<br>Bangalore. | **Member** |
| 4. | **Sri H.S. Jaikumar**<br>Joint Director (Technical cell),<br>Commerce & Industries Department,<br>Vikasa Soudha, Bangalore. | **Member** |
| 5. | **Smt B.S. Nandini**<br>Joint Director (VI & SEP),<br>Industries & Commerce Department,<br>Khanija Bhavan, Bangalore. | **Member** |
| 6. | **Sri M. Jagganatha Rao**<br>State Director,<br>Khadi and Village Industries Commission,<br>Doorvani Nagar, Bangalore. | **Member** |
| 7. | **Sri M. Manjunatha**<br>Govt Under Secrectary (Banking)<br>Finance Department,5th Stage,<br>M.S.Building, Bangalore | **Member** |

## ESTABLISHMENT:

The Total Sanctioned Strength of the Establishment is 355. The present working strength of the Board is 89 as on 31-03-2021. An amount of Rs 2388.25 lakhs (Rupees Two thousand three hundred Eighty eight lakhs only ) has been released by the State Government under Non-Plan Scheme to meet the salaries and other expenses of the Board during the year 2020-21

## ACTIVITIES OF THE BOARD

The activities of the Board are broadly classified into three sectors i.e.,

1. Khadi Sector
2. Village Industries Sector
3. Marketing Sector.

## 1. KHADI SECTOR:

"Khadi" is hand spun and hand woven fabric. A number of traditional artisans are working in the field of Khadi Industry in remote rural areas. Khadi includes Cotton Khadi, Silk Khadi, Woollen Khadi and Polyvastra.

### A. Marketing Development Assistance ( M.D.A ) Scheme

MDA is promotion assistance for development of Khadi. MDA is an assistance proposed to be provided on cost of production of Khadi and Polyvastra achieved by the certified Khadi institutions. Out of the MDA paid to the institutions, 25% goes to the Artisans as direct incentive, 30% towards implements/training/capacity building and 45% for marketing purpose of the Khadi Institutions.

Govt. of Karnataka, during the year 2012-13 has introduced MDA Scheme on par with KVIC in the interest of giving more employment opportunities to artisans involved in Khadi Production. In this Scheme 15% grant is provided on production of Khadi Products by Govt of Karnataka in addition to 20% M D A sanctioned by K V I C.

Govt. of Karnataka during 2020-21 an amount of Rs.1500.00 lakhs MDA has been released and this amount has been disbursed to 135 Khadi Institutions.

### B. Incentive wages

Govt. of Karnataka, in the interest of giving more and sustainable employment opportunities to the artisans involved in Khadi Production, incentive wages has been introduced during the year 2013-14. This incentive wages has to be released to Spinners, Weavers, other artisans and Khadi karyakarthas working in the Khadi Societies.

Government of Karnataka during the year 2020-21 an amount of Rs.1500.00 lakhs Incentive wages has been released and this amount has been disbursed to 13413 artisans (Spinners, Weavers, other artisans and Khadi karyakarthas) Working in the Khadi Institutions.

**E.** Performance for the year 2020-21 under Khadi Sector (as on 31-03-2021)

| Industry | Production (Rs. In Lakhs) | Sales (Rs. In Lakhs) | Employment Generated Nos. | Wages Earned (Rs. In Lakhs) |
|---|---|---|---|---|
| Cotton Khadi | 5626.00 | 5512.00 | 7305 | 4427.71 |
| Woolen Khadi | 1762.75 | 1675.26 | 4872 | 2625.76 |
| Silk Khadi | 23149.76 | 22455.50 | 3425 | 1986.50 |
| Polyvastra | 1353.59 | 1250.10 | 1506 | 803.48 |
| **Total** | **31892.1** | **30892.86** | **17108** | **9843.45** |

## 2. Village Industries Sector

The Khadi and Village Industries Commission has provided assistance to Karnataka state khadi and village Industries Board under three schemes namely, the Pattern Based Scheme (from 1957-58 to 1994-95) CBC Scheme & REGP Scheme (1995-1996 to 1999-2000) All the three schemes are not now operational.

The KVIB has implemented the following KVIC programmes during the period from 1957-58 to 2007-08. The details are as under.

| Sl. No | Scheme | No. Of Units Financed | Employment Generated (in Lakhs) | Financial Assistance (Rs. In crores) | | |
|---|---|---|---|---|---|---|
| | | | | Loan | Grant/M | Total |
| 1 | PBS (1957-58 to 1994-95) | 21180 | 2.82 | 106.79 | 4.42 | 111.21 |
| 2 | CBC bank (1995-96 to 1999-2000 | 2559 | 2.68 | 88.78 | 30.21 | 118.99 |
| 3 | REGP (2000-01 to 2007-08 | 4943 | 0.93 | 0.00 | 54.59 | 54.59 |
| | **Total** | **28682** | **6.43** | **195.57** | **89.22** | **284.72** |

**Note:**

The above three schemes are not operational at present. Form of Funding Scheme loan amounting to Rs.247.46 lakhs and general interest amounting to Rs.273.33 lakhs totaling Rs.520.78 lakhs (under BPL scheme) has been repaid to Khadi Commission during the year 2020-21

The progress of the unites financed under Pattern Based Scheme, CBC and REGP Scheme, during the year 2020-21 is furnished at Annexure-A, Annexure-B and Annexure-C respectively.

## B. Interest subsidy scheme :

To assist the tiny units to revalidate its activities by availing the working capital loan through the Bank, the Government of Karnataka has introduced Interest Subsidy scheme during 2013-14 vide it`s Government Order No.CI.41.SLV.2013-14 Date;30-09-2013 It is an ongoing scheme, where in the Karnataka state Khadi & Village Industries Board is compensating the Interest burden @9% to the Societies/Individuals of the Village Industries sector. The Board is releasing the Interest @ 9% on the loan to extent of Rs.3.00 lakhs availed by such Institutions from the Banks for a period of three years from the date of its availment.

As per G.O.NO. CI/8SLV/2014 dt 02-06-2014 this scheme applies to 176 Taluks of the state. The duration of the scheme is for 3 years and it is a continuation programme.

## C. Prime Minister Employment Generation Programme (P.M.E.G.P) (Present scheme under operation)

The Government of India has launched a Scheme called Prime Minister's Employment Generation Programme, to provide more employment opportunities to rural artisans. The entrepreneur who is interested to avail this benefit will be provided loan from the banks and the Margin Money will be provided by Khadi and Village Industries Commission/Khadi and village Industries Board. This Margin Money will be adjusted to the loan account of the entrepreneur only after three years of successful establishment of the unit.

The Ministry of MSME, Govt. of India has designed the scheme and released the guidelines in respect of implementation of the scheme. The Khadi and village Industries Commission being the National Nodal Agency is implementing the scheme through (1) The state Branch office of the Khadi and Village Industries Commission, (2) Khadi and Village Industries Board and (3) District Industries Centre.

The implementation of the scheme through these agencies is regulated by State Level Monitoring Committee headed by Principle Secretary of Commerce and industries deportment at of State level and District Magistrate at District level.

## The Salient features of the scheme

| | | |
|---|---|---|
| 1 | Beneficiaries own Contribution | The Entrepreneur should deposit his own contribution in the financing branch bank SB A/c @ mentioned below before release of First instalment of loan portion. (a) 10% of project cost in case of general category. (b) 5% of project cost in case of special category. |
| 2 | EDP Training | The beneficiary should undergo two weeks EDP training before release of loan Amount from the financial bank, in approved training centre. |
| 3 | Educational Qualification | The beneficiary should have Minimum pass in $8^{th}$ std for the projects more than 5 lakhs for Service units and for the projects more than 10 lakhs for production units. |
| 4 | Rural area definition | Revenue Village or a any area whose population does not exceed 20,000. |
| 5 | Village Industries definition | Any industry location in rural area which produces any goods (except the product shown in Negative list). |
| 6 | Per capita investment | The fixed capital investment per head employment should not exceed Rs.1, 00, 000/- |
| 7 | Limit of Project Cost | The Maximum limit of project cost is Rs.25.00 lakhs for production units and Rs.10.00 lakhs for service units. Which are not comes under negative list. |

The loans for the projects will be provided by the selected Nationalized Banks, Private Scheduled Banks, Grameena Banks and Co-operative Banks which are approved by Khadi and Village Industries Commission and **SLMC**. The Margin Money component will be provided by the implementing agencies.

**The Margin Money component details are as furnished below.**

